ಉ) ಇನ್ನೂ ಎಷ್ಟು ಕಾಮಗಾರಿಗಳು ಬಾಕಿ ಇವೆ ಹಾಗೂ ಇವುಗಳನ್ನು ಪೂರ್ಣಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಲಿಂಗನಮಕ್ಕಿ ಜಲಾಶಯದ ಬಳಿ ಹಾಗೂ ಜೋಗ್ ಜಲಪಾತದ ಬಳಿ ಕಾಮಗಾರಿಗಳು ಜೋಗ್ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಕೈಗೊಳ್ಳಲಾಗುತ್ತಿದೆ ಕಾರವಾರದ ಟಾಗೋರ್ ಬೀಚ್ ಅಭಿವೃದ್ಧಿಯನ್ನು ಜಿಲ್ಲಾಡಳಿತದ ವತಿಯಿಂದ ಅಂತೆಯೇ, ಬೇಲೂರಿನ ಬಳಿ ಅಂತರರಾಷ್ಟ್ರೀಯ ಮಟ್ಟದ ಹೋಟೆಲ್ ನಿರ್ಮಾಣವನ್ನು ಖಾಸಗಿ ಸಹಭಾಗಿತ್ವದಡಿ ಹೀಗೆ ವಿವಿಧ ಏಜೆನ್ಸಿಗಳ ಸಹಕಾರದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳು ಇನ್ನೂ ಪೂರ್ಣವಾಗಿರುವುದಿಲ್ಲ ಇವುಗಳ ಬಗ್ಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಿ ತ್ವರಿತವಾಗಿ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ ನಿವೇಶನ/ಜಮೀನುಗಳು ಅಗತ್ಯವಿರುವ ಯೋಜನೆಗಳಿಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸಂಪರ್ಕಿಸಿ ತ್ವರಿತವಾಗಿ ಜಮೀನನ್ನು ಒದಗಿಸುವಂತೆ ಕೋರಲಾಗಿದೆ ಇಲಾಖೆಯು ಯೋಜನೆಗಳನ್ನು ಜಾರಿಗೊಳಿಸಲು ಶೀಘ್ರ ಕ್ರಮಗಳನ್ನು ಕೈಗೊಳ್ಳುತ್ತಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1126(1513)**
ಸದಸ್ಯರ ಹೆಸರು	**ಶ್ರೀ ಮಲ್ಲಿಕಾರ್ಜುನ ಎಸ್ ಖೂಬಾ (ಬಸವಕಲ್ಯಾಣ)**
ಉತ್ತರಿಸುವ ಸಚಿವರು	**ಶ್ರೀ ಎಂ ಪಿ ಪ್ರಕಾಶ್ (ಮಾನ್ಯ ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)**

ಅ) ರಾಜ್ಯದಲ್ಲಿ ಶಾಸಕರುಗಳು, ಸಚಿವರು ಹಾಗೂ ರಾಜ್ಯಪಾಲರು ಹಾಗೂ ನ್ಯಾಯಾಧೀಶರುಗಳನ್ನು ಹೊರತು–ಪಡಿಸಿದಂತೆ ಇತರೆ ಯಾವ ಯಾವ ವ್ಯಕ್ತಿಗಳಿಗೆ, ರಾಜಕೀಯ ಪಕ್ಷಗಳ ಮುಖಂಡುಗಳಿಗೆ ಪೊಲೀಸ್ ಇಲಾಖೆಯಿಂದ ಅಂಗರಕ್ಷಕರು ಸೇರಿದಂತೆ ಯಾವ ಯಾವ ದರ್ಜೆಯ ಪೊಲೀಸ್ ಭದ್ರತೆಯನ್ನು ಒದಗಿಸಲಾಗಿದೆ (ವ್ಯಕ್ತಿಯ ವಿವರಗಳನ್ನು ಒದಗಿಸುವುದು)

ಪೊಲೀಸ್ ಭದ್ರತೆ ಒದಗಿಸಿರುವ ವ್ಯಕ್ತಿಗಳ ವಿವರಗಳನ್ನು ಇದಕ್ಕೆ ಲಗತ್ತಿಸಿರುವ ಅನುಬಂಧ–'ಎ' ಮತ್ತು 'ಬಿ' ನಲ್ಲಿ ನೀಡಲಾಗಿದೆ

ಆ) ಯಾವ ಮಾನದಂಡದ ಮೇಲೆ ಇವರುಗಳಿಗೆ ಭದ್ರತೆಯನ್ನು ಒದಗಿಸಲಾಗುತ್ತಿದೆ?

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಪೊಲೀಸ್ ಆಯುಕ್ತರು ನೀಡುವ ಬೆದರಿಕೆ ನಿರ್ಧರಣಾ ವರದಿಗಳು ಹಾಗೂ ಇತರೆ ಮೂಲಗಳ ಮಾಹಿತಿ ಆಧರಿಸಿ ಈ ವ್ಯಕ್ತಿಗಳಿಗೆ ಭದ್ರತೆಯನ್ನು ಒದಗಿಸಲಾಗುತ್ತದೆ

ಇ) ಇವರುಗಳಿಗೆ ಒದಗಿಸುವ ಭದ್ರತೆಯ ಬಗ್ಗೆ ಪರಾಮರ್ಶೆ ಸಭೆಗಳನ್ನು ಎಷ್ಟು ಬಾರಿ ನಡೆಸಲಾಗುವುದು?

2007ನೇ ಇಸವಿಯ ಜನವರಿ ತಿಂಗಳಲ್ಲಿ ಬದ್ರತೆಯ ಬಗ್ಗೆ 2 ಪರಾಮರ್ಶೆ ಸಭೆಗಳನ್ನು ನಡೆಸಲಾಗಿದೆ

ಈ) ಇದರ ಪ್ರಕಾರ ಇವರುಗಳಿಗೆ ಭದ್ರತೆಯ ಅಗತ್ಯವಿದೆಯೇ?

ಹೌದು

ಉ) ಅಗತ್ಯವಿಲ್ಲದಿದ್ದಲ್ಲಿ ಭದ್ರತೆಯನ್ನು ಹಿಂಪಡೆಯಲಾಗುವುದೇ?

ಅಗತ್ಯವಿಲ್ಲವೆಂದು ಪರಾಮರ್ಶೆಯ ಸಮಯದಲ್ಲಿ ಕಂಡುಬಂದಲ್ಲಿ ಅಂತಹವರಿಗೆ ನೀಡಿರುವ ಭದ್ರತೆಯನ್ನು ಹಿಂಪಡೆಯಲಾಗುವುದು

ಊ) ಇದಕ್ಕಾಗಿ ಕಳೆದ ಮೂರು ವರ್ಷಗಳಿಂದ ಇಲಾಖೆಗೆ ವೆಚ್ಚವಾಗಿರುವ ಹಣವೆಷ್ಟು?

ಕಳೆದ 3 ವರ್ಷಗಳಿಂದ ಪೊಲೀಸ್ ಭದ್ರತೆ ಒದಗಿಸುವ ಸಲುವಾಗಿ ರೂ,6,53,09,152=00ಗಳು ವೆಚ್ಚವಾಗಿರುತ್ತದೆ

ಋ) ಮೇಲ್ಕಂಡ ಗಣ್ಯರನ್ನು ಹೊರತುಪಡಿಸಿ ಇತರರಿಗೆ ಇಂತಹ ಭದ್ರತೆಯನ್ನು ಒದಗಿಸುತ್ತಿರುವುದರಿಂದ ಇಲಾಖೆಗೆ ಅನಗತ್ಯವಾಗಿ ವೆಚ್ಚದ
ಹೊರೆ ಯಾಗುತ್ತಿರುವುದರಿಂದ ಸರ್ಕಾರವು ಒದಗಿಸಲಾಗಿರುವ ಪೊಲೀಸ್ ಭದ್ರತೆಗೆ ಅಂತಹವರಿಂದ ಶುಲ್ಕವನ್ನು ವಸೂಲು ಮಾಡುವ ಬಗ್ಗೆ ಪರಿಶೀಲಿಸಲಾಗುವುದೇ?

ರಾಜ್ಯದ ಭದ್ರತಾ ಪರಮರ್ಶೆ ಸಮಿತಿಯಿಂದ ಭದ್ರತೆಯನ್ನು ಆದೇಶಿಸಿರುವ ವ್ಯಕ್ತಿಗಳಿಂದ ಭದ್ರತಾ ವ್ಯವಸ್ಥೆಯ ವೆಚ್ಚವನ್ನು ವಸೂಲಿ ಮಾಡುವ ಯಾವುದೇ ಪ್ರಸ್ತಾವನ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ ಆದರೆ, ಕೆಲವೆ ಕೆಲವು ವ್ಯಕ್ತಿಗಳಿಗೆ ಶುಲ್ಕ ಪಾವತಿ ಆಧಾರದ ಮೇರೆಗೆ ಸ್ಥಳೀಯ ಪರಿಸ್ಥಿತಿಗನುಗುಣವಾಗಿ ಸಂಬಂಧಪಟ್ಟ ಜಿಲ್ಲಾ/ನಗರ ಪೊಲೀಸ್‌ರವರಿಂದ ಪೊಲೀಸ್ ರಕ್ಷಣೆಯನ್ನು ಒದಗಿಸಲಾಗುತ್ತದೆ

ಎ) ಇಲ್ಲದಿದ್ದಲ್ಲಿ ಕಾರಣಗಳೇನು?

ಉದ್ಭವಿಸುವುದಿಲ್ಲ